**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**S.C. No. 140/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ ಎಲ್.ಸಿ.ಕಿಶೋರ್ ಕುಮಾರ್ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಚನ್ನೇಗೌಡ | 4 | 4 |
| ವಯಸ್ಸು | 33 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **17.03.2026.** | |
| ಉದ್ಯೋಗ | ಡ್ರೈವರ್ | | |
| ವಾಸ ಸ್ಥಳ | ಲಕ್ಕೇನಹಳ್ಳಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿತರು ಗೊತ್ತಿಲ್ಲ. ಚಾ ಸಾ 1 ಮತ್ತು ನಾನು ಒಂದೇ ಊರಿನವರು. 2018 ರಲ್ಲಿ ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಪಿರ್ಯಾದಿ ಆ ಸಮಯದಲ್ಲಿ ಕೋಳಿ ಅಂಗಡಿ ಇಟ್ಟುಕೊಂಡಿದ್ದರು. ಆರೋಪಿತರು ಏನು ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಆರೋಪಿತರು ರಾಜು ಅವರ ಜೊತೆ ಗಲಾಟೆ ಮಾಡಿದ್ದನ್ನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದಲ್ಲ. ನಾನು ಯಾವುದೇ ಪಂಚನಾಮೆಗೆ ಸಹಿ ಮಾಡಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಇರುವ ಸಹಿ ನನ್ನದಲ್ಲ. ನಾನು ಯಾವುದೇ ಪಂಚನಾಮೆಗೆ ಸಹಿ ಮಾಡಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 08.01.2017 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನನ್ನ ಸ್ನೇಹಿತ ಫೋನ್ ಮಾಡಿ ಅಶ್ವಥ್ ಕಟ್ಟೆ ಬಳಿ ಯಾರೋ ಕಾರಿನಲ್ಲಿ ಒಬ್ಬ ವ್ಯಕ್ತಿಯನ್ನು ತಳ್ಳಿ ಹೋಗಿದ್ದು, ನೋಡಿದಾಗ ಆತನಿಗೆ ರಕ್ತಗಾಯವಾಗಿದ್ದು, ವಿಚಾರ ಮಾಡಿದಾಗ ಅಲ್ಲಿ ಆ ವ್ಯಕ್ತಿ ನನ್ನ ಸ್ನೇಹಿತ ರಾಜು ಆಗಿದ್ದು, ಆಂಬ್ಯುಲೆನ್ಸ್ ಗೆ

ಫೋನ್ ಮಾಡಿ ಆತನ ವಿಚಾರ ಮಾಡಿದಾಗ ರಾಜು ತಾನು ಟಿ. ಬೇಗೂರಿನಲ್ಲಿ ತನ್ನ ಸ್ನೇಹಿತ ಹಷಿರ್ತ್ ಮೃತಪಟ್ಟಿದ್ದು ಆತನ ಮಣ್ಣಿನ ಕಾರ್ಯಕ್ರಮಕ್ಕೆ ಆತ ಮತ್ತು ನಿರಂಜನ್ ಹೋಗಿ ಕಾರ್ಯ ಮುಗಿಸಿಕೊಂಡು ಪಲ್ಸರ್ ಬೈಕ್ ನಲ್ಲಿ ಬರುತ್ತಿದ್ದಾಗ ಸುಮಾರು 5.30 ಕ್ಕೆ ರೆಸಿಡೆನ್ಸಿ ಕ್ಲಬ್ ಹಿಂಭಾಗ ದಾಲ್ಮೀಯಾ ಲೇಔಟ್ ನಲ್ಲಿ 15 ಜನ ಹುಟ್ಟಿದ ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾಗ ಮತ್ತು ಅವರುಗಳನ್ನು ಅವರನ್ನು ನೋಡಿ ಬಾರೋ ಕೇಕ್ ತಿನ್ನಿರಿ ಎಂದು ಕರೆದರು, ಅವರಿಬ್ಬರೂ ಅಲ್ಲಿ ಹೋದಾಗ ಅವರು ಕೇಕ್ ಕೊಟ್ಟಿದ್ದು ತಿಂದ ನಂತರ ಅವರವರೆ ಗಲಾಟೆ ಮಾಡಿಕೊಂಡಿದ್ದು ನಿರಂಜನ್ ಬಾಬುಗೂ ಬೈದರು, ಆತನಿಗೆ ಹೊಡೆಯ ಹೋದಾಗ ಆತ ಬಿಡಿಸಿದ್ದು ನಂತರ 3 ಜನರು ನೀನು ಯಾರೋ ಕೇಳಲು ಎಂದು ಬೈದರು ತನಗೆ ಕೈಗಳಿಂದ ಹೊಡೆದು ಅಲ್ಲೇ ಇದ್ದ ಕಾರಿನಲ್ಲಿ ಹಾಕಿಕೊಂಡು ಕೊಲೆ ಮಾಡುವ ಉದ್ದೇಶದಿಂದ ಒಂದು ಗತಿ ಕಾಣಿಸುತ್ತೇವೆ ಎಂದು ತನ್ನ ಅಕ್ಕ ಪಕ್ಕ ಕುಳಿತುಕೊಂಡು ಮತ್ತೊಬ್ಬ ಕಾರನ್ನು ಚಾಲನೆ ಮಾಡಿಕೊಂಡು ಹೋಗುವಾಗ ತನಗೆ ಹೊಡೆದರು, ತನ್ನನ್ನು ಕಾರಿನಲ್ಲಿ ಸುತ್ತಾಡಿಸಿ ದೊಣ್ಣೆ, ರಾಡ್ ಮತ್ತು ಕೈಗಳಿಂದ ಹೊಡೆದರು, ತಾನು ಕಿರುಚಾಡಿದ್ದರಿಂದ ರಾತ್ರಿ 8.30 ಕ್ಕೆ ಸೊಂಡೇಕೊಪ್ಪ ಗ್ರಾಮದ ಅಶ್ವಥ ಕಟ್ಟೆಯ ಬಳಿ ಕಾರಿನಲ್ಲಿ ತನ್ನನ್ನು ಕೆಳಗೆ ತಳ್ಳಿದ್ದರು, ನಂತರ ತನ್ನನ್ನು ಆಸ್ಪತ್ರೆಗೆ ಸೇರಿಸಿದ್ ಎಂದು ಹೇಳಿದ ಎಂದರೆ ಸರಿಯಲ್ಲ.

ನಂತರ ಆತನನ್ನು ಮಾತೃಶ್ರೀ ಆಸ್ಪತ್ರೆಗೆ ಸೇರಿಸಿದ್ದು, ಆತ ತೊಟ್ಟಿದ್ದ ರಕ್ತದ ಕಲೆಯಾದ ಬಟ್ಟೆಗಳನ್ನು ನಾನು ಹಾಜರುಪಡಿಸಿದ್ದು, ಆ ಸಮಯದಲ್ಲಿ ಈಗ ನನಗೆ ತೋರಿಸಿದ ಪಂಚನಾಮೆಯಲ್ಲಿ ಪೊಲೀಸರು ಸದರಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಬರೆದು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನಿಶಾನೆ ಪಿ9 ಎಂದು, ಹೇಳಿಕೆಯನ್ನು ನಿಶಾನೆ ಪಿ10 ಎಂದು ಗುರುತಿಸಲಾಯಿತು. ಅದೇ ದಿನ ಸಂಡೇಕೊಪ್ಪ ಗ್ರಾಮದ ಚನ್ನಕೇಶವ ಸ್ವಾ ಮಿ ದೇವಸ್ಥಾನದ ಮುಂದೆ ಅಶ್ವಥ್ ಕಟ್ಟೆಯ ಬಳಿ ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 1.45-2.30 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಮಾಡಿ ಬರೆದು ಓದಿ ಹೇಳಿದ ನಂತರ ಅಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನಿಶಾನೆ ಪಿ11 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ:</u> ಇಲ್ಲ ಎಂದು ಹೇಳಿರುತ್ತಾರೆ.

**SC No. 140/2024**

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-

**(ಶ್ರೀಮತಿ. ಬಿ.ಎಸ್.ರೇಖಾ )**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.